MVC No. 124/2021 PW-1

**ದಿನಾಂಕ 24.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :ಅರ್ಜಿದಾರರ ಪರ ವಕೀಲರಿಂದ :**

ನಾನು ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಪ್ರಥಮ ವರ್ತಮಾನ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದೂರಿನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಮಹಜರನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಮಾಲುಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದೋಷಾರೋಪಣಾ ಪಟ್ಟಿಯ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ವಾಹನಕ್ಕೆ ಜಖಂ ಅದ ಬಗ್ಗೆ ವಾಹನದ ರಿಪೇರಿ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, 5 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-7 ಎಂದು, ಅದಕ್ಕೆ ಸಂಬಂದಪಟ್ಟ ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, (ಸಿಡಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವಂತಹ External DVD write ನಲ್ಲಿ ಹಾಕಿ ಕಂಪ್ಯೂಟರ್ ನಲ್ಲಿ ನೋಡಿ ಭಾವಚಿತ್ರಗಳಿಗೆ ತಾಳೆ ಹೊಂದುತ್ತದೆ ಎನ್ನುವುದನ್ನು ದೃಡೀಕರಣ ಮಾಡಿಕೊಳ್ಳಲಾಗಿದೆ.) ವಾಹನ ತಪಾಸಣಾ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಎದುರುದಾರರಾದ ಆರ್ 2 ಪರ ವಕೀಲರಿಂದ :**

ಅಪಘಾತದಲ್ಲಿ ಡ್ಯಾಮೇಜ್ ಆದ ಕಾರು ನನ್ನ ಹೆಸರಿನಲ್ಲಿದೆ. ಸದರಿ ಕಾರಿನ ಆರ್ ಸಿ ನನ್ನ ಹೆಸರಿನಲ್ಲಿದೆ. ಅಪಘಾತವಾದ ಸಮಯದಲ್ಲಿ ಕಾರನ್ನು ನಾನೇ ಚಾಲನೆ ಮಾಡುತ್ತಿದ್ದೆ. ನನ್ನ ಬಳಿ ಡಿಎಲ್ ಇದೆ. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು

ಚಾಲನೆ ಮಾಡುತ್ತಿದ್ದ ಕಾರಿಗೆ ವಿಮೆ ಮಾಡಿಸಿರುತ್ತೇನೆ. ಸದರಿ ವಿಮಾ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಿಮಾ ಕಂಪನಿಯಿಂದ ನಾನು ಡ್ಯಾಮೇಜ್ ಪರಿಹಾರವನ್ನು ಮಾಡಿಸಿಕೊಂಡಿಲ್ಲ. ವಿಮಾ ಕಂಪನಿಯಿಂದ ನಾನು ಡ್ಯಾಮೇಜ್ ಪರಿಹಾರವನ್ನು ಕ್ಲೇಮ್ ಮಾಡಿಲ್ಲ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಸಲು ವಿಮಾ ಸರ್ಟಿಫಿಕೆಟ್ ಮತ್ತು ಸದರಿ ವಿಮಾ ಕಂಪನಿಯಿಂದ ಯಾವುದೇ ಡ್ಯಾಮೇಜ್ ಪರಿಹಾರವನ್ನು ಕ್ಲೇಮ್ ಮಾಡಿಲ್ಲ ಎನ್ನುವ ಬಗ್ಗೆ ದಾಖಲೆಯನ್ನು ಪಡೆದುಕೊಂಡು ಹಾಜರುಪಡಿಸಲು ತೊಂದರೆ ಇದೆ. ಆ ಬಗ್ಗೆ ದಾಖಲೆಗಳನ್ನು ಮುಂದಿನ ದಿನಗಳಲ್ಲಿ ಹಾಜರುಪಡಿಸುತ್ತೇನೆ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ಶುಭಾ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**